

**ಉಚ್ಚಾರಣಾ ದೋಷ ಎಂದರೇನು ?**

- ಮಾತನಾಡುವಾಗ ಅಕ್ಷರಗಳ ಉಚ್ಚಾರಣೆಯಲ್ಲಿ ಕಠಿಣತೆ ಅಥವಾ ತೊಂದರೆಯನ್ನು ಉಚ್ಚಾರಣೆಯ ದೋಷ ಎನ್ನುವರು.
- ಉಚ್ಚಾರಣೆಯ ತೊಂದರೆ ಇರುವ ವ್ಯಕ್ತಿಯ/ಮಗುವಿನ ಮಾತನ್ನು ಅರ್ಥಮಾಡಿಕೊಳ್ಳುವುದರಲ್ಲಿ ಕಷ್ಟವಾಗುತ್ತದೆ.

**ಉಚ್ಚಾರಣಾ ದೋಷಕ್ಕೆ ಕಾರಣಗಳು**

- ಕಿವುಡುತನ , ಅನುವಂಶಿಕತೆ , ನರತೊಂದರೆ , ತಪ್ಪು ಕಲಿಕೆ, ಬಾಯಲ್ಲಿರುವ ಅಂಗಗಳಲ್ಲಿನ ಗಾತ್ರ/ಅವ್ಯವಸ್ಥಿತ ಬೆಳವಣಿಗೆ . ಉದಾ :- ಸೀಳುತುಟಿ, ಚಿಕ್ಕನಾಲಿಗೆ/ನಾಲಿಗೆಯ ಕಟ್ಟು.
- ಸಾಮಾನ್ಯವಾಗಿ ಐದು ವರ್ಷದ ಮಕ್ಕಳ ಮಾತುಗಳು ಕೇಳುವವರಿಗೆ /ಪಾಲಕರಿಗೆ ಅರ್ಥವಾಗುತ್ತದೆ . ಎಂಟು ವರ್ಷದ ಮಕ್ಕಳು ಎಲ್ಲಾ ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಬೇಕು . ವಯಸ್ಸಿಗೆ ತಕ್ಕಂತೆ ಅಕ್ಷರಗಳ ಉಚ್ಚಾರಣೆ ಬೆಳವಣಿಗೆಯಾಗುತ್ತಿರುತ್ತದೆ.
- ಮಗುವೇನಾದರೂ ವಯಸ್ಸಿಗೆ ತಕ್ಕಂತೆ ಆಯಾ ಅಕ್ಷರಗಳನ್ನು ಉಚ್ಚಾರಿಸದಿದ್ದಾಗ ಮಗುವು ಉಚ್ಚಾರಣಾ ತೊಂದರೆಗೆ ಒಳಗಾಗಬಹುದು .

**ಗುಣಲಕ್ಷಣಗಳು**

ಉಚ್ಚಾರಣಾ ತೊಂದರೆಯುಳ್ಳ ಮಕ್ಕಳು ಈ ಕೆಳಕಂಡವುಗಳನ್ನು ಅವರ ಮಾತಿನಲ್ಲಿ ತೋರಿಸಬಹುದು .

- ಕೆಲವು ಶಬ್ದ/ಅಕ್ಷರಗಳನ್ನು ಹೇಳದಿರುವುದು ಉದಾ:- ಬಸ್ಸು ಹೇಳುವುದಕ್ಕೆ ಬ ಎನ್ನುವುದು
- ಕೆಲವು ಸಲ ಬೇರೆ ಅಕ್ಷರವನ್ನು ಬದಲಿಸಿ ಹೇಳುವುದು ಉದಾ :- ಕಾಲು ಹೇಳುವುದಕ್ಕೆ ತಾಲು ಹೇಳುವುದು .
- ಕೆಲವು ಸಲ ಬೇರೆ ಅಕ್ಷರವನ್ನು ಕೂಡಿಸಿ ಹೇಳುವುದು ಉದಾ : ಶಾಲೆ ಹೇಳಲು ಶಾಇಲೆ ಅನ್ನುವುದು .
- ಕೆಲವು ಸಲ ಒತ್ತಕ್ಷರಗಳನ್ನು ಸರಳವಾಗಿ ಹೇಳದಿರುವುದು. ಉದಾ : - ಸ್ಕೂಟರ್ ಹೇಳಲು ಕೂಟರ್ ಅನ್ನುವುದು
- ಅಕ್ಷರಗಳಲ್ಲಿ ಅಸ್ಪಷ್ಟತೆ ಇರುವುದು. ಉದಾ :- ಸಂಸ್ಕಾರ ಹೇಳಲು ತಂತಾರ ಎನ್ನುವುದು.
- “ಸ” ಮತ್ತು “ರ” ಅಕ್ಷರಗಳನ್ನು ಉಚ್ಚರಿಸಲು ಕಷ್ಟವಾಗುವುದು.

ಕೆಲವು ಸಲ ಮಕ್ಕಳಿಗೆ ಅಕ್ಷರವನ್ನು ಬದಲಾಯಿಸಿ ಹೇಳಿದರೆ ಪದದ ಅರ್ಥ ಬದಲಾಗುವುದು ಎಂದು ಗೊತ್ತಿಲ್ಲದಿರುವುದು.




**ರೋಗ ನಿರ್ಣಯ**

ಉಚ್ಚಾರಣೆಯ ತೊಂದರೆಯನ್ನು ಕಂಡುಹಿಡಿಯಲು ಮಗುವಿಗೆ ವಾಕ್ ಮತ್ತು ಭಾಷಾ ತಜ್ಞರು ಅತ್ಯವಶ್ಯಕ.

ವಾಕ್ ಭಾಷಾ ತಜ್ಞರು ಮಕ್ಕಳ ಜೊತೆ ಮಾತನಾಡಿ ಕೆಲವು ಪದಗಳನ್ನು ಉಚ್ಚರಿಸಲು ಹೇಳುತ್ತಾರೆ. ನಂತರ ಮಗುವಿನ ವಯಸ್ಸಿಗೆ ತಕ್ಕಂತೆ ಶಬ್ದಗಳ ಉಚ್ಚಾರಣೆಯ ಬೆಳವಣಿಗೆಯನ್ನು ನೋಡುತ್ತಾರೆ.

ಮಗುವೇನಾದರೂ ತಪ್ಪಾಗಿ ಉಚ್ಚರಿಸಿದಲ್ಲಿ , ಮಗುವಿನ ಸ್ಪಷ್ಟಮಾತಿನ ತರಬೇತಿಯ ಬಗ್ಗೆ ಪಾಲಕರಿಗೆ ಹೇಳುತ್ತಾರೆ.

**ಚಿಕಿತ್ಸೆ**

ಕೆಲವು ಶಬ್ದಗಳಲ್ಲಿ ಮಾತ್ರ ತೊಂದರೆ ಇದ್ದರೆ ಸ್ವಲ್ಪ ದಿನದ ನಂತರ ಹೋಗಬಹುದು ಅದೇನಾದರೂ ಹೆಚ್ಚು ಅಕ್ಷರಗಳ ಉಚ್ಚಾರಣೆಯಲ್ಲಿ ತೊಂದರೆ ಇದ್ದು ಯಾವುದೇ ಅಂಗಾಂಗಗಳ ತೊಂದರೆ ಇಲ್ಲದಿದ್ದಲ್ಲಿ ಮಗುವಿಗೆ ಮಾತಿನ ತರಬೇತಿಯು ಅತ್ಯವಶ್ಯಕ.

ತರಬೇತಿಯಲ್ಲಿ ಮಗುವಿಗೆ ತುಟಿಯ , ನಾಲಿಗೆಯ ಜಾಗವನ್ನು ತೋರಿಸುವುದರ ಮುಖಾಂತರ ಅಕ್ಷರಗಳ ಉಚ್ಚಾರಣೆಯನ್ನು ಹೇಳಿಕೊಡಬೇಕು . ಭಾಷಾತಜ್ಞರು ಬಾಯಿಯ ಅಂಗಾಂಗಳ ವ್ಯಾಯಾಮಗಳನ್ನು ಹೇಳಿಕೊಡುವುದರ ಮುಖಾಂತರ ಅಕ್ಷರಗಳ ಉಚ್ಚಾರಣೆಯನ್ನು ಹೇಳಿಕೊಡುತ್ತಾರೆ.

ಮಾತಿನ ತರಬೇತಿಯನ್ನು ಕೇವಲ ಒಂದೇ ಮಗುವನ್ನು ಇಟ್ಟುಕೊಂಡು ಹೇಳಿಕೊಡಬಹುದು / (ಗುಂಪಿನಲ್ಲಿ) ಹೇಳಿ ಕೊಡಬಹುದು.

ಎಲ್ಲಾ ಮಕ್ಕಳಿಗೆ ಒಟ್ಟಿಗೆ ಹೇಳಿಕೊಡುವುದರಿಂದ , ಒಬ್ಬರನ್ನೊಬ್ಬರು ನೋಡಿಕೊಂಡು ಬೇಗನೆ ಕಲಿಯಲು

ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ಸುಮಾರು ಮಕ್ಕಳು ಸ್ಪಷ್ಟತೆಯಿಂದ ಮಾತನಾಡಲು ಕಲಿಯುತ್ತಾರೆ.

**ಮಾತು ಮತ್ತು ಭಾಷಾ ತಜ್ಞರ ಪಾತ್ರ**

ಮಾತು ಮತ್ತು ಭಾಷಾ ತಜ್ಞರು ಕೆಲವು ಸ್ಪಷ್ಟ ಉಚ್ಛಾರಣೆಯನ್ನು ಪರಶೀಲಿಸುವಂತಹ ಪರೀಕ್ಷೆಗಳನ್ನು ಮಾಡುವುದರ ಮೂಲಕ ತೊಂದರೆಯನ್ನು ಪತ್ತೆಹಚ್ಚುತ್ತಾರೆ (ಇಂತಹ ಪರೀಕ್ಷೆಗಳಲ್ಲಿ ಕಲವು ಅಕ್ಷರಗಳನ್ನು ಬೇರೆ ಬೇರೆ ಸನ್ನಿವೇಶಗಳಲ್ಲಿ ಮಾತನಾಡಿಸುವುದರ ಮುಖಾಂತರ ಕಂಡುಹಿಡಿಯುತ್ತಾರೆ.)

ಅದರ ಜೊತೆಗೆ ಬಾಯಿಯ ಅಂಗಾಂಗಗಳಲ್ಲಿ ಶಕ್ತಿ ಇಲ್ಲದಿರುವುದನ್ನು ಬೇರೆ ಬೇರೆ ಪರೀಕ್ಷೆಗಳನ್ನು ಮಾಡುವುದರ ಮೂಲಕ ಮಗುವಿಗೆ ಉಚ್ಛಾರಣೆ ತೊಂದರೆ ಇದೆಯೋ ಅಥವಾ ಇಲ್ಲವೋ ಎಂದು ಹೇಳುತ್ತಾರೆ.

ಇದೆಲ್ಲವನ್ನೂ ನೋಡಿ , ಮಗುವಿಗೆ ಯಾವ ತರಹದ ತರಬೇತಿ  ಬೇಕೆನ್ನುವುದನ್ನು ನೋಡುತ್ತಾರೆ ಮತ್ತು ಇದೆಲ್ಲವನ್ನೂ ಗಮನಿಸಿ ಪಾಲಕರು ಮನೆಯಲ್ಲಿ ಮಾಡಿಸಬೇಕಾದ ಚಟುವಟಿಕೆಗಳ ಬಗ್ಗೆ ಹೇಳಿಕೊಡುತ್ತಾರೆ. ಇದರಿಂದ ಮಗುವಿಗೆ ಕಲಿಯಲು ಮತ್ತು ಪಾಲಕರಿಗೆ ಕಲಿಸಲು ಸಹಾಯವಾಗುತ್ತದೆ.


*ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆ,*

*ತಪೋವನದ ಹತ್ತಿರ, ಶ್ರೀ ಶಿವರಾತ್ರೀಶ್ವರ ನಗರ, ಕೆಲಗೇರಿ*
*ಧಾರವಾಡ - 580007*

*ಫೋನ್ ಸಂಖ್ಯೆ : 0836-2770775/2776776*

*ಸಮಯ: ಸೋಮವಾರದಿಂದ ಶನಿವಾರದವರೆಗೆ*

*10am to 5pm*

***ಭೇಟಿ ನೀಡಿ :*** *http://jssishdharwad.org*


**ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**

# ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆ, ಧಾರವಾಡ

(ಭಾರತೀಯ ಪುನರ್ವಸತಿ ಪರಿಷತ್ತಿನ ಮಾನ್ಯತೆ
ಹಾಗೂ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ
ಸಂಯೋಜನೆ ಪಡೆದಿರುವ ಸಂಸ್ಥೆ)

ಶ್ರೀ ಶಿವರಾತ್ರೀಶ್ವರ ನಗರ,
ಕೆಲಗೇರಿ, ಧಾರವಾಡ-580007

# ಉಚ್ಛಾರಣಾ ದೋಷ